# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1732 (1997) |
| ಸದಸ್ಯರ ಹೆಸರು | ಶ್ರೀ ಎಂ ನಾರಾಯಣಸ್ವಾಮಿ |
| ಉತ್ತರಿಸುವ ದಿನಾಂಕ | 24-03-2021 |
| ಉತ್ತರಿಸುವವರು | ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮುಜರಾಯಿ ಇಲಾಖೆಯಡಿಯಲ್ಲಿರುವ ಒಟ್ಟು ದೇವಸ್ಥಾನಗಳ ಸಂಖ್ಯೆ ಎಷ್ಟು; ಅವು ಯಾವುವು: (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ 34564 ದೇವಸ್ಥಾನ/ಅಧಿಸೂಚಿತ ಸಂಸ್ಥೆಗಳಿವೆ.<br><br>ಜಿಲ್ಲಾವಾರು ಮಾಹಿತಿಯನ್ನು **ಅನುಬಂಧದಲ್ಲಿ** ಒದಗಿಸಿದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಈ ದೇವಸ್ಥಾನಗಳ ವಿವಿಧ ಮೂಲಗಳಿಂದ ಸಂಗ್ರಹಿಸಿದ ಮೊತ್ತವೆಷ್ಟು; (ಜಿಲ್ಲಾವಾರು ವಿವರ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳಿಂದ 2016-17 ರಿಂದ 2018-19ರವರೆಗೆ ವಿವಿಧ ಮೂಲಗಳಿಂದ ಸಂಗ್ರಹವಾದ ವಾರ್ಷಿಕ ಆದಾಯ ಒಟ್ಟು **ರೂ1480.98 ಕೋಟಿಗಳಾಗಿರುತ್ತದೆ.** ವಿವರ ಕೆಳಗಿನಂತಿದೆ. |

| ಪ್ರವರ್ಗ | 2016-17 | 2017-18 | 2018-19 |
|---|---|---|---|
| | **ಮೊತ್ತ ರೂ ಕೋಟಿಗಳಲ್ಲಿ** | | |
| **'ಎ'** | 426.42 | 482.52 | 505.56 |
| **'ಬಿ'** | 22.31 | 22.95 | 21.22 |
| **ಒಟ್ಟು** | **448.73** | **505.47** | **526.78** |

(ಜಿಲ್ಲಾವಾರು ವಿವರವು ಅಗಾಧ ಪ್ರಮಾಣದಲ್ಲಿದ್ದು, ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.)

ಸಮೂಹ-'ಸಿ' ಪ್ರವರ್ಗ ದೇವಾಲಯಗಳಿಗೆ ವಾರ್ಷಿಕ ಆದಾಯವು ತುಂಬಾ ಕಡಿಮೆಯಾಗಿರುತ್ತದೆ. ಈ ದೇವಾಲಯಗಳಿಗೆ ವಾರ್ಷಿಕ ತಸ್ತೀಕ್/ವರ್ಷಾಸನ ರೂ.48,000/- ಮೊತ್ತವನ್ನು ನಿಗಧಿಪಡಿಸಲಾಗಿರುತ್ತದೆ.

.....2

| | | |
|---|---|---|
| ಇ) | ಈ ದೇವಸ್ಥಾನಗಳಿಂದ ಸಂಗ್ರಹಿಸಿದ ಹಣವನ್ನು ಸರ್ಕಾರ ಬೇರೆ ಯೋಜನೆಗಳಿಗೆ ಬಳಸಿಕೊಳ್ಳುತ್ತಿದೆಯೇ: ಹಾಗಿದ್ದಲ್ಲಿ, ಯಾವ ಯಾವ ಯೋಜನೆಗಳಿಗೆ ಉಪಯೋಗಿಸಿಕೊಳ್ಳುತ್ತಿದೆ: | ರಾಜ್ಯದಲ್ಲಿರುವ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯ ದೇವಾಲಯಗಳಲ್ಲಿ ಬರುವ ಆದಾಯವನ್ನು ಆಯಾಯ ದೇವಾಲಯಗಳ ಸಂಬಂಧಿಸಿದ ಖಾತೆಯಲ್ಲಿ ಸಂಗ್ರಹಿಸಿ, ದೇವಾಲಯದ ನಿರ್ವಹಣೆಗೆ ನಿತ್ಯ ಕಟ್ಲೆ, ಹೆಚ್ಚು ಕಟ್ಲೆ, ರಥೋತ್ಸವ, ಸಿಬ್ಬಂದಿ ವೆಚ್ಚ, ಅಭಿವೃದ್ಧಿ ಮೂಲಭೂತ ಸೌಕರ್ಯ ಒದಗಿಸಲು ಹಾಗೂ ದೇವಾಲಯದ ವತಿಯಿಂದ ನಡೆಸುತ್ತಿರುವ ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಮತ್ತು ಸಾರ್ವಜನಿಕ ಕಲ್ಯಾಣ ಉದ್ದೇಶ ಇತ್ಯಾದಿಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ 1997ರ ಕಾಯ್ದೆಯ ಕಲಂ 36(1)ರಡಿಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆಗೊಂಡ ಆಯವ್ಯಯದ ಅನ್ವಯ ಬಳಸಲಾಗುತ್ತದೆ.<br>ಸದರಿ ದೇವಾಲಯಗಳ ಆದಾಯವನ್ನು ಬೇರೆ ಯೋಜನೆಗಳಿಗೆ ಬಳಸಿಕೊಳ್ಳಲು ಅವಕಾಶವಿರುವುದಿಲ್ಲ |
| ಉ) | ಮುಜರಾಯಿ ಇಲಾಖೆ ಅಡಿಯಲ್ಲಿ ಬರುವ ಪುರಾತನ ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಯೋಜನೆಗಳನ್ನು ರೂಪಿಸಿದೆ: | ಧಾರ್ಮಿಕ ದತ್ತಿ ಇಲಾಖೆ ಅಡಿಯಲ್ಲಿ ಬರುವ ಪುರಾತನ ದೇವಸ್ಥಾನಗಳನ್ನು ರಾಜ್ಯ ಪ್ರವಾಸೋದ್ಯಮ ಇಲಾಖೆ, ರಾಜ್ಯ ಪುರಾತ್ವತ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆಯಡಿಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. |
| ಈ) | ಈ ದೇವಸ್ಥಾನಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು: (ಜಿಲ್ಲಾವಾರು ಮಾಹಿತಿಯನ್ನು ನೀಡುವುದು) | (ಈ) ಮತ್ತು (ಊ)ಗಳಿಗೆ ಪ್ರಸ್ತುತ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಒಟ್ಟು **34564** ಅಧಿಸೂಚಿತ ಸಂಸ್ಥೆ/ದೇವಾಲಯಗಳಿಗೆ ಸಂಬಂಧಿಸಿದಂತೆ, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಮಾಹಿತಿಯನ್ನು ಪಡೆದು ಕ್ರೋಢೀಕರಿಸಿ ಉತ್ತರ ಸಲ್ಲಿಸಬೇಕಾಗಿರುವುದರಿಂದ ಕಾಲಾವಕಾಶದ ಅವಶ್ಯಕತೆ ಇರುತ್ತದೆ. |
| ಊ) | ರಾಜ್ಯದಲ್ಲಿ ಮುಜರಾಯಿ ಇಲಾಖೆ ಅಡಿಯಲ್ಲಿ ಬರುವ ಒಟ್ಟು ದೇವಸ್ಥಾನಗಳ ಪೈಕಿ ಇದುವರೆಗೂ ಎಷ್ಟು ದೇವಸ್ಥಾನಗಳನ್ನು ಅಭಿವೃದ್ಧಿಪಡಿಸಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | |

ಸಂಖ್ಯೆ: ಕಂಇ 89 ಮುಸಪ್ರ 2021

(ಕೋಟಾ ಶ್ರೀನಿವಾಸ ಪೂಜಾರಿ)
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ
ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ರಾಜ್ಯದಲ್ಲಿರುವ ಒಟ್ಟು ಅಧಿಸೂಚಿತ ಸಂಸ್ಥೆಗಳ ವಿವರದ ತ:ಖ್ತೆ

| ಕ್ರ ಸಂ | ಜಿಲ್ಲೆ | ಪ್ರಸ್ತುತಧಾರ್ಮಿಕದತ್ತಿಇಲಾಖೆಯ ವ್ಯಾಪ್ತಿಯಲ್ಲಿರುವ ದೇವಾಲಯಗಳ ಸಂಖ್ಯೆ |
|---|---|---|
| 1 | ಬೆಂಗಳೂರು ನಗರ | 1104 |
| 2 | ಬೆಂಗಳೂರು ಗ್ರಾಮಾಂತರ | 1140 |
| 3 | ಬಾಗಲಕೋಟೆ | 1166 |
| 4 | ಬಳ್ಳಾರಿ | 1299 |
| 5 | ಬೆಳಗಾವಿ | 3806 |
| 6 | ವಿಜಯಪುರ | 551 |
| 7 | ಬೀದರ್ | 530 |
| 8 | ಚಾಮರಾಜನಗರ | 414 |
| 9 | ಚಿಕ್ಕಬಳ್ಳಾಪುರ | 1072 |
| 10 | ಚಿಕ್ಕಮಗಳೂರು | 880 |
| 11 | ಚಿತ್ರದುರ್ಗ | 305 |
| 12 | ದಕ್ಷಿಣಕನ್ನಡ | 495 |
| 13 | ದಾವಣಗೆರೆ | 621 |
| 14 | ಧಾರವಾಡ | 930 |
| 15 | ಗದಗ | 1388 |
| 16 | ಕಲ್ಬುರ್ಗಿ | 1630 |
| 17 | ಹಾಸನ | 2456 |
| 18 | ಹಾವೇರಿ | 1291 |
| 19 | ಕೊಡಗು | 07 |
| 20 | ಕೋಲಾರ | 1328 |
| 21 | ಕೊಪ್ಪಳ | 739 |
| 22 | ಮಂಡ್ಯ | 2120 |
| 23 | ಮೈಸೂರು | 1311 |
| 24 | ರಾಯಚೂರು | 1288 |
| 25 | ರಾಮನಗರ | 867 |
| 26 | ಶಿವಮೊಗ್ಗ | 643 |
| 27 | ತುಮಕೂರು | 2461 |
| 28 | ಉಡುಪಿ | 809 |
| 29 | ಉತ್ತರಕನ್ನಡ | 701 |
| 30 | ಯಾದಗಿರಿ | 1212 |
| ಒಟ್ಟು | | 34564 |

ಆಯುಕ್ತರ ಪರವಾಗಿ
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು
ಧರ್ಮದಾಯ ದತ್ತಿಗಳ ಇಲಾಖೆ,
ಚಾಮರಾಜಪೇಟೆ, ಬೆಂಗಳೂರು-560 018